ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/51/ಎಜಿಪಿ/2017-18/ಬಸ್ಥಾವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 7/11/18

## ಸುತ್ತೋಲೆ

**ವಿಷಯ:** ಖಾಸಗಿ ಅನುದಾನಿತ ಪದವಿ, ಕಾನೂನು ಹಾಗೂ ಶಿಕ್ಷಣ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರುಗಳಿಗೆ ವೃತ್ತಿ ಪದೋನ್ನತಿ ಅಡಿಯಲ್ಲಿ ವೇತನ ಶ್ರೇಣಿ ರೂ. 37400-67000 + ರೂ.9000/- ಎ.ಜಿ.ಪಿ.ಯನ್ನು ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ದಿನಾಂಕ : 24.12.2009 ರ ಆದೇಶ ಸಂಖ್ಯೆ: ಇಡಿ 37 ಯುಎನ್‌ಇ 2009.
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 21 ಯುಎನ್‌ಇ 2011, ದಿನಾಂಕ: 01.02.2011.
3. ಯು.ಜಿ.ಸಿ. ನಿಯಮಗಳ ದಿನಾಂಕ : 30.06.2010ರ ಸಂಖ್ಯೆ : ಎಫ್ 3-1/2009ರ ಆದೇಶ.
4. ಸರ್ಕಾರದ ಪತ್ರ ಸಂಖ್ಯೆ: ಇಡಿ 359 ಯುಎನ್‌ಇ 2011 ದಿನಾಂಕ: 05.01.2012 ಹಾಗೂ ಸರ್ಕಾರದ ಪತ್ರ ಸಂಖ್ಯೆ: ಇಡಿ 382 ಯುಎನ್ ಇ 2012 ದಿನಾಂಕ: 17.03.2016
5. ಯು.ಜಿ.ಸಿ.ಯ ದಿನಾಂಕ: 04.05.2016 ಹಾಗೂ 11.07.2016ರ ಅಧಿಸೂಚನೆ.
6. ಸರ್ಕಾರದ ಆದೇಶ ಸಂಖ್ಯೆ: ಇಡಿ 382 ಯುಎನ್‌ಇ 2012, ದಿನಾಂಕ: 25.09.2014 ಹಾಗೂ ದಿನಾಂಕ: 22.02.2017ರ ತಿದ್ದುಪಡಿ ಆದೇಶ.
7. ಸರ್ಕಾರದ ದಿನಾಂಕ : 14.12.2017ರ ಸಂಖ್ಯೆ : ಇಡಿ 110 ಯುಇಸಿ 2016ರ ಆದೇಶ.
8. ಸರ್ಕಾರಿ ಆದೇಶ ಸಂಖ್ಯೆ: ಇಡಿ 22 ಯುಇಸಿ 2018 ದಿನಾಂಕ: 18.05.2018

* * * *

ಇಲಾಖೆಯ ವ್ಯಾಪ್ತಿಯಲ್ಲಿನ ಖಾಸಗಿ ಅನುದಾನಿತ ಪದವಿ, ಕಾನೂನು ಹಾಗೂ ಶಿಕ್ಷಣ ಕಾಲೇಜುಗಳ ಪ್ರಾಂಶುಪಾಲರು/ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರುಗಳ ಗಮನಕ್ಕೆ ತರುವುದೇನೆಂದರೆ, 2006ರ ಯು.ಜಿ.ಸಿ. ವೇತನ ಶ್ರೇಣಿಗಳನ್ನು ಪದವಿ ಹಾಗೂ ಕಾನೂನು ಕಾಲೇಜುಗಳ ಮತ್ತು ಶಿಕ್ಷಣ ಕಾಲೇಜುಗಳ ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರುಗಳಿಗೆ ಅನುಕ್ರಮವಾಗಿ ಉಲ್ಲೇಖ (1) ಹಾಗೂ (2)ರ ಆದೇಶದಲ್ಲಿ ಜಾರಿಗೊಳಿಸಲಾಗಿರುತ್ತದೆ. ಸದರಿ, 2006ರ ಪರಿಷ್ಕೃತ

ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ಎ.ಪಿ.ಐ. ಅಂಕಗಳ ಆಧಾರದ ಮೇಲೆ ಪರಿಗಣಿಸಿ ವೃತ್ತಿ ಪದೋನ್ನತಿ ನೀಡುವ ಕುರಿತು ಯು.ಜಿ.ಸಿ.ಯ ಉಲ್ಲೇಖ (3) ರಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ಈ ಮಾರ್ಗಸೂಚಿಗಳಂತೆ ವೃತ್ತಿ ಪದೋನ್ನತಿಗಾಗಿ ಕ್ರಮಕೈಗೊಳ್ಳಲು ಉಲ್ಲೇಖ (6)ರ ಸರ್ಕಾರಿ ಆದೇಶದಲ್ಲಿ ಸೂಚಿಸಲಾಗಿರುತ್ತದೆ.

ಆದರೆ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ ಯುಜಿಸಿ ವೇತನ ಪಡೆಯುತ್ತಿರುವ ಸಿಬ್ಬಂದಿಗಳಿಗೆ ಅವರು ಅರ್ಹರಿದ್ದಲ್ಲಿ ಹಿರಿಯ ವೇತನ ಶ್ರೇಣಿ/ಆಯ್ಕೆ ವೇತನ ಶ್ರೇಣಿ ಸ್ಥಾನೀಕರಣ ಸೌಲಭ್ಯವನ್ನು ಹೊಸ ಎ.ಪಿ.ಐ ಪ್ರಕ್ರಿಯೆಯನ್ನು ಅನುಸರಿಸದೇ ದಿನಾಂಕ: 30.08.2010ರವರೆಗೆ ಮಂಜೂರು ಮಾಡಬಹುದೆಂದು ಉಲ್ಲೇಖ (4) ರ ಪತ್ರಗಳಲ್ಲಿ ತಿಳಿಸಲಾಗಿದೆ.

ಇದರನ್ವಯ ದಿನಾಂಕ: 30.08.2010 ರೊಳಗಾಗಿ ಆಯ್ಕೆ ವೇತನ ಶ್ರೇಣಿ ನಿಗದಿಯಾಗಿ 03 ವರ್ಷ ಪೂರೈಸಿದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ರೂ.9000/- ಎಜಿಪಿಯನ್ನು ಉಲ್ಲೇಖ(7)ಮತ್ತು (8)ರಲ್ಲಿ ನಿಗದಿಪಡಿಸಲಾಗಿದೆ.

ಈ ಹಿನ್ನಲೆಯಲ್ಲಿ ದಿನಾಂಕ: 30.08.2010ರ ನಂತರ ಆಯ್ಕೆ ವೇತನ ಶ್ರೇಣಿ ನಿಗದಿಯಾಗಿ 03ವರ್ಷ ಪೂರೈಸಿದ ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರುಗಳಿಗೆ ರೂ.15600-39100+8000 ರಿಂದ ರೂ.37400-67000+9000 ನಿಗದಿಪಡಿಸಲು ಯುಜಿಸಿಯ ದಿನಾಂಕ: 11.07.2016ರ ಮಾರ್ಗ ಸೂಚನೆಯಂತೆ ಈ ಕೆಳಕಂಡ ಷರತ್ತು ಹಾಗೂ ಸೂಚನೆಗಳನ್ನು ಹೊರಡಿಸಲಾಗಿದೆ. ಇದರನ್ವಯ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಲಾಗಿದೆ.

**<u>ಷರತ್ತು ಹಾಗೂ ಮಾರ್ಗಸೂಚಿಗಳು :</u>**

1. ದಿನಾಂಕ: 30.08.2010 ಹಾಗೂ ಆನಂತರದಲ್ಲಿ ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರ 15600-39100 ವೇತನ ಶ್ರೇಣಿಯಲ್ಲಿ ರೂ.8000 ಎ.ಜಿ.ಪಿ. ಪಡೆದು 03 ವರ್ಷಗಳ ಸೇವಾವಧಿಯನ್ನು ಪೂರೈಸಿದವರು ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.
2. ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಯುಜಿಸಿಯ ದಿನಾಂಕ: 11/07/2016ರ ಅಧಿಸೂಚನೆಯಲ್ಲಿನ ಈ ಕೆಳಕಂಡ APPENDIX ನಲ್ಲಿ ನೀಡಿರುವ ನಿರ್ದೇಶನ ಹಾಗೂ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

   a) ಗ್ರಂಥಪಾಲಕರಿಗೆ ಸಂಬಂಧಿಸಿದಂತೆ :

   APPENDIX-III, <u>Table-VII</u> (Category I, II & III),
   APPENDIX-III, <u>Table-VIII A</u>
   APPENDIX-III, <u>Table-IX</u>

   b) ದೈಹಿಕ ಶಿಕ್ಷಣ ಬೋಧಕರಿಗೆ ಸಂಬಂಧಿಸಿದಂತೆ :

   APPENDIX-III, <u>Table-IV</u> (Category I, II & III),
   APPENDIX-III, <u>Table-V A</u>
   APPENDIX-III, <u>Table-VI</u>
3. ಉನ್ನತ (Higher) ಎ.ಜಿ.ಪಿ.ಗೆ ಅರ್ಹರಿರುವ ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರು ಕ್ರ.ಸಂ. (2)ರ APPENDIX ಗಳ ಮಾರ್ಗಸೂಚಿ ಹಾಗೂ ನಿರ್ದೇಶನದಂತೆ (Category I, II & III) ನಮೂನೆಗಳಲ್ಲಿ ಭರ್ತಿ ಮಾಡಿ ನಿಗದಿಪಡಿಸಲಾಗಿರುವ ಎಲ್ಲಾ <u>ದೃಢೀಕೃತ ದಾಖಲೆ ಹಾಗೂ ಸೇವಾ ಪುಸ್ತಕದೊಂದಿಗೆ</u> ಆಯ್ಕೆ ಸಮಿತಿಗೆ ಸಲ್ಲಿಸತಕ್ಕದ್ದು.

4. ದಿನಾಂಕ: 11.07.2016ರ ಯು.ಜಿ.ಸಿ. ನಿರ್ದೇಶನ/ಮಾರ್ಗಸೂಚಿಗಳ ಪ್ರಕಾರ ಎ.ಪಿ.ಐ. ಅಂಕಗಳನ್ನು ಅರ್ಹತಾ ದಿನಾಂಕದವರೆಗೆ ನಮೂದಿಸತಕ್ಕದ್ದು.
5. ಪ್ರಾಂಶುಪಾಲರು ತಮ್ಮ ಹಂತದಲ್ಲಿ ಯುಜಿಸಿಯ ದಿನಾಂಕ: 30.06.2010ರ ಕಂಡಿಕೆ: 5.1.5ರಲ್ಲಿ ನೀಡಲಾಗಿರುವ ನಿರ್ದೇಶನಗಳನ್ವಯ ಆಯ್ಕೆ ಸಮಿತಿಯನ್ನು ರಚಿಸಿ ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರು ಸಲ್ಲಿಸಿರುವ ನಿಗದಿತ ನಮೂನೆಗಳು, ಪ್ರಮಾಣ ಪತ್ರಗಳು ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಸಂ. (2) ರಲ್ಲಿ ತಿಳಿಸಿರುವಂತೆ ಉನ್ನತ ಎ.ಜಿ.ಪಿ.ಗೆ ಅರ್ಹರಿದ್ದಲ್ಲಿ ಸಾಮಾನ್ಯ ಮಾಹಿತಿ ಭಾಗ-I,II ಹಾಗೂ ಸೇವಾ ಪುಸ್ತಕದೊಂದಿಗೆ ಪ್ರಸ್ತಾವನೆಯನ್ನು ಸಮಿತಿಯ ಶಿಫಾರಸ್ಸಿನೊಂದಿಗೆ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರ ಮೂಲಕ ಈ ಕಛೇರಿಗೆ ಕಳುಹಿಸಿಕೊಡುವಂತೆ ತಿಳಿಸಿದೆ. ಹಾಗೂ ಅರ್ಹರಿಲ್ಲದಿದ್ದಲ್ಲಿ ಸಮಿತಿಯ ಹಂತದಲ್ಲಿ ತಿರಸ್ಕರಿಸಿ ಈ ಕಛೇರಿಗೆ ವರದಿ ಮಾಡತಕ್ಕದು.
6. ಪದೋನ್ನತಿ ಪಡೆಯುತ್ತಿರುವ ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರುಗಳಿಗೆ ಎಪಿಐ ಅಂಕಗಳನ್ನು ನೀಡುವ "Expert Selection Committee" ಯ ಸಭೆಯ ನಡವಳಿಯನ್ನು ಸಲ್ಲಿತಕ್ಕದ್ದು
7. ರೂ.9000/- ಎ.ಜಿ.ಪಿ.ಗೆ ಪರಿಗಣಿಸಲಾಗುವ ಅವಧಿಯಲ್ಲಿ ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರು ವೇತನರಹಿತ ರಜೆ/ಅನಧಿಕೃತ ಗೈರು ಹಾಜರಾಗಿದ್ದಲ್ಲಿ ಆ ಅವಧಿಯನ್ನು ಮುಂದೂಡಿ ಅರ್ಹತಾ ದಿನಾಂಕವನ್ನು ನಿಗದಿಪಡಿಸತಕ್ಕದ್ದು.
8. ಗ್ರಂಥಪಾಲಕರು ಹಾಗೂ ದೈಹಿಕ ಶಿಕ್ಷಣ ಬೋಧಕರುಗಳ ವಿರುದ್ಧ ಶಿಸ್ತು ಪ್ರಕರಣಗಳು ದಾಖಲಾಗಿ/ವಿಚಾರಣೆ ಹಂತದಲ್ಲಿ ಇದ್ದಲ್ಲಿ ಪ್ರಸ್ತಾವನೆಗಳನ್ನು ಪರಿಗಣಿಸತಕ್ಕದ್ದಲ್ಲ.
9. ಕೇಂದ್ರ ಕಛೇರಿಯ ಹಂತದಲ್ಲಿ ರಚಿಸಲ್ಪಡುವ Selection Committee ಮುಂದೆ ಸೂಕ್ತ ದಾಖಲೆಗಳೊಂದಿಗೆ ನಿಗದಿಪಡಿಸಿದ ದಿನಾಂಕದಂದು ಸಂದರ್ಶನಕ್ಕೆ ಹಾಜರಾಗಬೇಕಾಗಿರುತ್ತದೆ.

**ಅಡಕ : ದಿನಾಂಕ : 11.07.2016 ರ ಯು.ಜಿ.ಸಿ.ಯ**
**ಅಧಿಸೂಚನೆ ಹಾಗೂ ಸಾಮಾನ್ಯ ಮಾಹಿತಿ ಭಾಗ-I,II**

**ಕಾಲೇಜು ಶಿಕ್ಷಣ ಆಯುಕ್ತರು.**

ಇವರಿಗೆ:

1. ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ – ಮೇಲ್ಕಂಡ ಷರತ್ತು ಹಾಗೂ ಮಾರ್ಗಸೂಚಿಗಳನ್ವಯ ರೂ. 9000/- ಎಜಿಪಿಗಾಗಿ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವಂತೆ ಸೂಚಿಸಲಾಗಿದೆ.

ಪ್ರತಿಯನ್ನು :

1. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಸುತ್ತೋಲೆ ಹಾಗೂ ನಮೂನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧದಲ್ಲಿ ಅಗತ್ಯ ಕ್ರಮಕ್ಕಾಗಿ.
2. ಕಛೇರಿ ಪ್ರತಿ.

# ಗ್ರಂಥಪಾಲಕರುಗಳಿಗೆ ಸಂಬಂಧಿಸಿದ ನಮೂನೆ

**(2006ರ ಯು.ಜಿ.ಸಿ.ವೇತನ ಶ್ರೇಣಿಗಳಲ್ಲಿ ರೂ.9000/-ಎ.ಜಿ.ಪಿ. ಮಂಜೂರಾತಿಯ ಬಗ್ಗೆ)**

**ಭಾಗ-1 ಸಾಮಾನ್ಯ ಮಾಹಿತಿ**

| | | |
|---|---|---|
| 1 | ಹೆಸರು (ಸೇವಾಪುಸ್ತಕದಲ್ಲಿ ನಮೂದಿಸಿರುವಂತೆ) | |
| 2 | ಹುದ್ದೆ | |
| 3 | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು & ಸ್ಥಳ | |
| 4 | ಸರ್ಕಾರ/ಇಲಾಖೆಯಿಂದ ಹೊರಡಿಸಿರುವ ನೇಮಕಾತಿ ಆದೇಶದ ಪ್ರತಿ | ಆದೇಶದ ಪ್ರತಿ ಲಗತ್ತಿಸುವುದು |
| 5 | ಕರ್ತವ್ಯಕ್ಕೆ ಹಾಜರಾದ ದಿನಾಂಕ (ಸೇವಾ ಪುಸ್ತಕದಲ್ಲಿ ನಮೂದಿಸಿರುವಂತೆ) | |
| 6 | ಯು.ಜಿ.ಸಿ ವೇತನ ಶ್ರೇಣಿ ನಿಗಧಿಯಾದ ದಿನಾಂಕ | ಆದೇಶದ ಪ್ರತಿ ಲಗತ್ತಿಸುವುದು |
| 7 | ವಿದ್ಯಾರ್ಹತೆ : NET/SLET/Ph.D/ M.Phil ಪಡೆದ ದಿನಾಂಕ | ಅಂಕಪಟ್ಟಿ, ಪ್ರಮಾಣ ಪತ್ರಗಳನ್ನು ಲಗತ್ತಿಸುವುದು. |
| 8 | ರೂ. 6000/- ರಿಂದ 7000/- ಎಜಿಪಿ ನಿಗದಿಯಾದ ದಿನಾಂಕ | ಆದೇಶದ ಪ್ರತಿ ಲಗತ್ತಿಸುವುದು |
| 9 | ರೂ. 7000/- ರಿಂದ 8000/- ಎಜಿಪಿ ನಿಗದಿಯಾದ ದಿನಾಂಕ | ಆದೇಶದ ಪ್ರತಿ ಲಗತ್ತಿಸುವುದು |
| 10 | ವೇತನ ರಹಿತ ರಜೆ, ಅನಧಿಕೃತ ಗೈರು ಹಾಜರಾಗಿದಲ್ಲಿ ಇಂತಹ ಅವಧಿಯ ಮಾಹಿತಿ. ಇಲ್ಲದೇ ಇದ್ದಲ್ಲಿ ಆಡಳಿತ ಮಂಡಳಿಯಿಂದ ಶಿಫಾರಸ್ಸು ಪ್ರಮಾಣ ಪತ್ರ | ದಾಖಲಾತಿ ಸಲ್ಲಿಸಬೇಕು |
| 11 | "One Course/Training under the Categories of Library automation/Analytical tool Development of academic documentation" ಇದರ ಬಗ್ಗೆ ದಾಖಲಾತಿ ಒದಗಿಸುವುದು. | ಪ್ರತಿ ಲಗತ್ತಿಸುವುದು |
| 12 | ISBN/ISSN ಸಂಖ್ಯೆಯನ್ನು ಹೊಂದಿರುವ ಗ್ರಂಥ/ಲೇಖನ | ಶೀರ್ಷಿಕೆಯ ಹಾಗೂ ISBN/ ISSN ಸಂಖ್ಯೆ ಇರುವ ಪುಟ್ಟಗಳ ಪ್ರತಿ ಲಗತ್ತಿಸುವುದು. |
| 13 | ರೂ. 9000/- ಎ.ಜಿ.ಪಿ.ಗೆ ಅರ್ಹತೆ ಹೊಂದಿರುವ ದಿನಾಂಕ | |

ಮೇಲ್ಕಂಡ ಮಾಹಿತಿಯು ಸರಿಯಾಗಿರುವುದಾಗಿ ಪ್ರಮಾಣೀಕರಿಸುತ್ತೇನೆ.

**ಅರ್ಜಿದಾರರ ಸಹಿ ಮೊಹರಿನೊಂದಿಗೆ**

ಮೇಲ್ಕಂಡ ಮಾಹಿತಿಯು ಕಛೇರಿಯ ದಾಖಲೆಗಳನ್ವಯ ತಾಳೆ ಮಾಡಿ ಸರಿಯಿರುವುದಾಗಿ ದೃಢೀಕರಿಸುತ್ತೇನೆ.

**ಪ್ರಾಂಶುಪಾಲರ ಸಹಿ ಮೊಹರಿನೊಂದಿಗೆ**

ಭಾಗ-2

## IV SUMMARY OF API SCORE

| Sl. No | Criteria | ಆ.ವೇ.ಶ್ರೇ. ರೂ.8000/- ಎ.ಜಿ.ಪಿ. ನಿಗದಿಯಾದ ದಿನಾಂಕದಿಂದ ಅರ್ಹತಾ ದಿನಾಂಕದವರೆಗೆ Academic/API Scoring | | | | | | | Total API Score for Assessment Period | API score allotted by Expert committee assessment | Remarks |
|---|---|---|---|---|---|---|---|---|---|---|---|
| | | 2010-11 | 2011-12 | 2012-13 | 2013-14 | 2014-15 | 2015-16 | 2016-17 | | | |
| I | Procurement, organization, and delivery of knowledge and information through Library services Marks 75/year | | | | | | | | | | |
| II | Professional Development & Extension activities Min. marks 50/Assessment period | | | | | | | | | | |
| III | Research & Academic Contribution Min. marks 75/Assessment period | | | | | | | | | | |
| II+ III | Minimum total API scores under Category-II & III 150/ Assessment period | | | | | | | | | | |
| IV | Expert Assessment System Selection Committee | | | | | | | | | | |
| V | Percentage Distribution of Weightage Points in the Expert Assessment (Total weightage=100. Minimum required for promotion is 50) | | | | | | | | | | |

**One may score the balance of points from either Category II or Category III to achieve the minimum score required under Category II +III**

**Enclose list of essential document: (only one set)**

ಮೇಲ್ಕಂಡ ಮಾಹಿತಿಯು ಸರಿಯಾಗಿರುವುದಾಗಿ ಪ್ರಮಾಣೀಕರಿಸುತ್ತೇನೆ.

ಅರ್ಜಿದಾರರ ಸಹಿ ಮೊಹರಿನೊಂದಿಗೆ

ಶ್ರೀ/ಶ್ರೀಮತಿ____________ ಹುದ್ದೆ______________ ಇವರು ಸಲ್ಲಿಸಿರುವ ದಾಖಲಾತಿಗಳನ್ನು ಆಯ್ಕೆ ಸಮಿತಿಯು ಪರಿಶೀಲಿಸಿ Cat-Iಗೆ _____ ಅಂಕಗಳು, Cat-II+III ಕ್ಕೆ _____ ಅಂಕಗಳನ್ನು ನೀಡಲಾಗಿದೆ. ವೇತನ ಶ್ರೇಣಿ ರೂ.37400-67000 ರಲ್ಲಿ ರೂ.9000/- ಎಜಿಪಿಯನ್ನು ದಿನಾಂಕ _____ ರಿಂದ ಮಂಜೂರು ಮಾಡಲು ಶಿಫಾರಸ್ಸು ಮಾಡಲಾಗಿದೆ.

ಆಯ್ಕೆ ಸಮಿತಿ ಸದಸ್ಯರ ಸಹಿ, ಪದನಾಮ
ಮೊಹರಿನೊಂದಿಗೆ

## ದೈಹಿಕ ಶಿಕ್ಷಣ ಬೋಧಕರುಗಳಿಗೆ ಸಂಬಂಧಿಸಿದ ನಮೂನೆ

**(2006ರ ಯು.ಜಿ.ಸಿ.ವೇತನ ಶ್ರೇಣಿಗಳಲ್ಲಿ ರೂ.9000/-ಎ.ಜಿ.ಪಿ. ಮಂಜೂರಾತಿಯ ಬಗ್ಗೆ)**

**ಭಾಗ-1 ಸಾಮಾನ್ಯ ಮಾಹಿತಿ**

| | | |
|---|---|---|
| 1 | ಹೆಸರು<br>(ಸೇವಾಪುಸ್ತಕದಲ್ಲಿ ನಮೂದಿಸಿರುವಂತೆ) | |
| 2 | ಹುದ್ದೆ | |
| 3 | ಕಾರ್ಯ ನಿರ್ವಹಿಸುತ್ತಿರುವ ಕಾಲೇಜು & ಸ್ಥಳ | |
| 4 | ಸರ್ಕಾರ/ಇಲಾಖೆಯಿಂದ ಹೊರಡಿಸಿರುವ ನೇಮಕಾತಿ ಆದೇಶದ ಪ್ರತಿ | ಆದೇಶದ ಪ್ರತಿ ಲಗತ್ತಿಸುವುದು |
| 5 | ಕರ್ತವ್ಯಕ್ಕೆ ಹಾಜರಾದ ದಿನಾಂಕ (ಸೇವಾ ಮಸ್ತಕದಲ್ಲಿ ನಮೂದಿಸಿರುವಂತೆ) | |
| 6 | ಯು.ಜಿ.ಸಿ ವೇತನ ಶ್ರೇಣಿ ನಿಗಧಿಯಾದ ದಿನಾಂಕ | ಆದೇಶದ ಪ್ರತಿ ಲಗತ್ತಿಸುವುದು |
| 7 | ವಿದ್ಯಾರ್ಹತೆ : NET/SLET/Ph.D/ M.Phil ಪಡೆದ ದಿನಾಂಕ | ಅಂಕಪಟ್ಟಿ, ಪ್ರಮಾಣ ಪತ್ರಗಳನ್ನು ಲಗತ್ತಿಸುವುದು. |
| 8 | ರೂ. 6000/- ರಿಂದ 7000/- ಎಜಿಪಿ ನಿಗದಿಯಾದ ದಿನಾಂಕ | ಆದೇಶದ ಪ್ರತಿ ಲಗತ್ತಿಸುವುದು |
| 9 | ರೂ. 7000/- ರಿಂದ 8000/- ಎಜಿಪಿ ನಿಗದಿಯಾದ ದಿನಾಂಕ | ಆದೇಶದ ಪ್ರತಿ ಲಗತ್ತಿಸುವುದು |
| 10 | ವೇತನ ರಹಿತ ರಜೆ, ಅನಧಿಕೃತ ಗೈರು ಹಾಜರಾಗಿದಲ್ಲಿ ಇಂತಹ ಅವಧಿಯ ಮಾಹಿತಿ. ಇಲ್ಲದೇ ಇದ್ದಲ್ಲಿ ಆಡಳಿತ ಮಂಡಳಿಯಿಂದ ಶಿಫಾರಸ್ಸು ಪ್ರಮಾಣ ಪತ್ರ | ದಾಖಲಾತಿ ಸಲ್ಲಿಸಬೇಕು |
| 11 | "Evidence of having produced.teams/athletes" ಇದರ ಬಗ್ಗೆ ದಾಖಲಾತಿ ಒದಗಿಸುವುದು. | ಪ್ರತಿ ಲಗತ್ತಿಸುವುದು |
| 12 | ISBN/ISSN ಸಂಖ್ಯೆಯನ್ನು ಹೊಂದಿರುವ ಗ್ರಂಥ/ಲೇಖನ | ಶೀರ್ಷಿಕೆಯ ಹಾಗೂ ISBN/ ISSN ಸಂಖ್ಯೆ ಇರುವ ಪುಟ್ಟಗಳ ಪ್ರತಿ ಲಗತ್ತಿಸುವುದು. |
| 13 | ರೂ. 9000/- ಎ.ಜಿ.ಪಿ.ಗೆ ಅರ್ಹತೆ ಹೊಂದಿರುವ ದಿನಾಂಕ | |

ಮೇಲ್ಕಂಡ ಮಾಹಿತಿಯು ಸರಿಯಾಗಿರುವುದಾಗಿ ಪ್ರಮಾಣೀಕರಿಸುತ್ತೇನೆ.

**ಅರ್ಜಿದಾರರ ಸಹಿ ಮೊಹರಿನೊಂದಿಗೆ**

ಮೇಲ್ಕಂಡ ಮಾಹಿತಿಯು ಕಛೇರಿಯ ದಾಖಲಾತಿಗಳನ್ವಯ ತಾಳೆ ಮಾಡಿ ಸರಿಯಿರುವುದಾಗಿ ದೃಢೀಕರಿಸುತ್ತೇನೆ.

**ಪ್ರಾಂಶುಪಾಲರ ಸಹಿ ಮೊಹರಿನೊಂದಿಗೆ**

ಭಾಗ–2

**IV SUMMARY OF API SCORE**

| Sl. No | Criteria | ಆ.ವೇ.ಶ್ರೇ. ರೂ.8000/– ಎ.ಜಿ.ಪಿ. ನಿಗದಿಯಾದ ದಿನಾಂಕದಿಂದ ಅರ್ಹತಾ ದಿನಾಂಕದವರೆಗೆ Academic/API Scoring 2010-11 | 2011-12 | 2012-13 | 2013-14 | 2014-15 | 2015-16 | 2016-17 | Total API Score for Assessment Period | API score allotted by Expert committee assessment | Remarks |
|---|---|---|---|---|---|---|---|---|---|---|---|
| I | Teaching, Training, coaching, sports person development and sports management activities Marks 75/year | | | | | | | | | | |
| II | Professional Development & Extension activities Min. marks 50/Assessment period | | | | | | | | | | |
| III | Research & Academic Contribution Min. marks 75/Assessment period | | | | | | | | | | |
| II+ III | Minimum total API scores under Category-II & III 150/ Assessment period | | | | | | | | | | |
| IV | Expert Assessment System- Selection Committee | | | | | | | | | | |
| V | Percentage Distribution of Weightage Points in the Expert Assessment (Total weightage=100. Minimum required for promotion is 50) | | | | | | | | | | |

**One may score the balance of points from either Category II or Category III to achieve the minimum score required under Category II +III**

**Enclose list of essential document: (only one set)**

ಮೇಲ್ಕಂಡ ಮಾಹಿತಿಯು ಸರಿಯಾಗಿರುವುದಾಗಿ ಪ್ರಮಾಣೀಕರಿಸುತ್ತೇನೆ.

ಅರ್ಜಿದಾರರ ಸಹಿ ಮೊಹರಿನೊಂದಿಗೆ

ಶ್ರೀ/ಶ್ರೀಮತಿ________________ ಹುದ್ದೆ__________________ ಇವರು ಸಲ್ಲಿಸಿರುವ ದಾಖಲಾತಿಗಳನ್ನು ಆಯ್ಕೆ ಸಮಿತಿಯು ಪರಿಶೀಲಿಸಿ Cat-Iಗೆ ______ ಅಂಕಗಳು, Cat-II+III ಕ್ಕೆ ______ ಅಂಕಗಳನ್ನು ನೀಡಲಾಗಿದೆ. ವೇತನ ಶ್ರೇಣಿ ರೂ.37400–67000 ರಲ್ಲಿ ರೂ.9000/– ಎಜಿಪಿಯನ್ನು ದಿನಾಂಕ ______ರಿಂದ ಮಂಜೂರು ಮಾಡಲು ಶಿಫಾರಸ್ಸು ಮಾಡಲಾಗಿದೆ.

ಆಯ್ಕೆ ಸಮಿತಿ ಸದಸ್ಯರ ಸಹಿ, ಪದನಾಮ
ಮೊಹರಿನೊಂದಿಗೆ